4

ದಿನಾಂಕ**:04.07.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

1. ಡಿ.ಡಬ್ಲ್ಯೂ.3 ರವರ ತಂದೆಯ ಹೆಸರು ಏನು ಎಂದರೆ ಸಿದ್ದಲಿಂಗಪ್ಪ. ಸಿದ್ದಲಿಂಗಪ್ಪನವರು ರೇವಣ್ಣನವರ ಮಗ ಟಿ.ಆರ್ ರೇಣುಖಪ್ಪನವರ ವಿರುದ್ದ ದಾವೆಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಸಿದ್ದಲಿಂಗಪ್ಪನವರ ಪರವಾಗಿ ನಾನು ಸದರಿ ದಾವೆಯಲ್ಲಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾರಾದರೂ ಕರೆದರೆ ಸಾಕ್ಷಿ ಹೇಳುವ ಅಭ್ಯಾಸವಿದ್ದು, ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟಿ.ಆರ್. ರೇಣುಖಪ್ಪನವರನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ಸದರಿ ವ್ಯಕ್ತಿ ನ್ಯಾಯಾಲಯದಲ್ಲಿದ್ದಾರೆ.

2. ವಾದಿಯ ಗಂಡ ರೇಣುಖಪ್ಪನವರ ಮಗನ ಮಗನೆಂದರೆ ಗೊತ್ತಿಲ್ಲ. 1 ನೇಪ್ರತಿವಾದಿಯ ತಾತನ ಹೆಸರು ಏನು ಎಂದರೆ ಗೊತ್ತಿಲ್ಲ. 1 ನೇಪ್ರತಿವಾದಿ ಸಂಗಮೇಶ್ ರವರ ತಂದೆಯ ಅಣ್ಣ-ತಮ್ಮಂದಿರು ಎಷ್ಟು ಜನ ಎಂದರೆ ಇಬ್ಬರು ಇರುತ್ತಾರೆ. ಅವರೆಂದರೆ ಸಿದ್ದಲಿಂಗಪ್ಪ ಮತ್ತು ಸಿದ್ದಗಂಗಪ್ಪ. ಸದರಿಯವರಿಗೆ ಎಷ್ಟು ಆಸ್ತಿಗಳು ಸೇರಿದ್ದವು ಎಂದರೆ ಗೊತ್ತಿಲ್ಲ .ಸದರಿಯವರು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ಯಾವ ಕಾರಣಕ್ಕಾಗಿ ದಾವೆಯನ್ನು ದಾಖಲು ಮಾಡಿದ್ದಾರೆಂದು ಗೊತ್ತಿಲ್ಲ ಎಂದರೆ ಸರಿ . ದಾವಾ ಸ್ವತ್ತುಗಳ ಬಗ್ಗೆ ಗೊತ್ತಿಲ್ಲ ಎಂದರೆ ಸರಿ .

3. ನಾನು ಸಂಗಮೇಶ್ , ಕಾತ್ಯಾಯಿನಿ ಮತ್ತು ಸಿದ್ದಲಿಂಗಪ್ಪ ನವರು ವಿಭಾಗ ಮಾಡಿಕೊಂಡಿರುವ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ . ಸದರಿ ಪತ್ರಕ್ಕೆ ವಾದಿ ಸಹಿ ಮಾಡಿಲ್ಲ ಎಂದರೆ ಸರಿ . ಸದರಿ ಪತ್ರವನ್ನು ಯಾವ ಯಾವ ದಾಖಲೆಯನ್ನು ನೋಡಿ ಬರೆದಿದ್ದಾರೆ ಎಂದರೆ ಗೊತ್ತಿಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಪತ್ರವನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ .ಪತ್ರದ ಒಕ್ಕಣೆ ಗೊತ್ತಿಲ್ಲದೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಜಿ.ದೀಪಾ)
ಅಧಿಕ ಹಿರಿಯ ಸಿವಿಲ್ ಮತ್ತು
ಸಿ.ಜೆ.ಎಂ. ನ್ಯಾಯಾಧೀಶರು ,
ತುಮಕೂರು .

ಸಾಕ್ಷಿಯ ಸಹಿ